26. "ಅದರ ಜ್ಞಾನ ಅಲ್ಲಾಹನಿಗಿದೆ, ನಾನಂತು ಕೇವಲ ಸ್ಪಷ್ಟವಾದ ಎಚ್ಚರಿಕೆ ನೀಡುವವನಾಗಿದ್ದೇನೆ" ಎಂದು ಹೇಳಿರಿ.

قُلْ إِنَّمَا الْعِلْمُ عِنْدَ اللَّهِ وَإِنَّمَا
أَنَا نَذِيرٌ مُبِينٌ ٢٦

27. ಮುಂದೆ ಅದು ಸಮೀಪವಾಗಿರುವುದನ್ನು ಇವರು ಕಂಡಾಗ, ನಿರಾಕರಣೆ ಮಾಡಿದ್ದ ಎಲ್ಲ ಜನರ ಮುಖಗಳು ವಿಕಾರಗೊಳ್ಳುವುವು ಮತ್ತು ಆಗ ಅವರೊಡನೆ, "ನೀವು ಆಗ್ರಹಿಸುತ್ತಿದ್ದ ವಸ್ತು ಇದುವೇ ಆಗಿದೆ" ಎಂದು ಹೇಳಲಾಗುವುದು.

فَلَمَّا رَأَوْهُ زُلْفَةً سِيئَتْ وُجُوهُ الَّذِينَ
كَفَرُوا وَقِيلَ هَٰذَا الَّذِي كُنْتُمْ
بِهِ تَدَّعُونَ ٢٧

28. ಅಲ್ಲಾಹನು ನನ್ನನ್ನೂ ನನ್ನ ಸಂಗಾತಿಗಳನ್ನೂ ನಾಶಗೊಳಿಸಲಿ ಅಥವಾ ನಮ್ಮ ಮೇಲೆ ಕೃಪೆ ತೋರಲಿ- ಸತ್ಯನಿಷೇಧಿಗಳನ್ನು ವೇದನಾಯುಕ್ತ ಯಾತನೆಯಿಂದ ರಕ್ಷಿಸುವವರಾರು ಎಂಬ ಕುರಿತು ನೀವೆಂದಾದರೂ ಯೋಚಿಸಿದ್ದೀರಾ? ಎಂದು ಇವರೊಡನೆ ಕೇಳಿರಿ.[12]

قُلْ أَرَأَيْتُمْ إِنْ أَهْلَكَنِيَ اللَّهُ وَمَنْ
مَعِيَ أَوْ رَحِمَنَا فَمَنْ يُجِيرُ الْكَافِرِينَ
مِنْ عَذَابٍ أَلِيمٍ ٢٨

29. ಅವನು ಮಹಾ ಕರುಣಾನಿಧಿ, ನಾವು ಅವನ ಮೇಲೆಯೇ ವಿಶ್ವಾಸ ವಿರಿಸಿದ್ದೇವೆ ಮತ್ತು ಅವನ ಮೇಲೆಯೇ ಭರವಸೆಯನ್ನಿರಿಸಿದ್ದೇವೆ. ಸುವ್ಯಕ್ತವಾದ ಪಥಭ್ರಷ್ಟತೆಯಲ್ಲಿ ಬಿದ್ದಿರುವವನು ಯಾರೆಂದು ಸದ್ಯದಲ್ಲೇ ನಿಮಗೆ ತಿಳಿದು ಬರುವುದು ಎಂದು ಇವರೊಡನೆ ಹೇಳಿರಿ.


قُلْ هُوَ الرَّحْمَٰنُ آمَنَّا بِهِ وَعَلَيْهِ
تَوَكَّلْنَا فَسَتَعْلَمُونَ مَنْ هُوَ فِي
ضَلَالٍ مُبِينٍ ٢٩


30. ನಿಮ್ಮ ಬಾವಿಗಳ ನೀರು ನೆಲದೊಳಕ್ಕೆ ಇಂಗಿ ಹೋದರೆ, ಆ ನೀರಿನ ಹರಿಯುವ ಚಿಲುಮೆಗಳನ್ನು ನಿಮಗೆ ಪುನಃ ಹೊರತಂದು ಕೊಡುವವರು ಯಾರೆಂದು ನೀವು ಯೋಚಿಸಿದ್ದೀರಾ? ಎಂದು ಇವರೊಡನೆ ಕೇಳಿರಿ.

قُلْ أَرَأَيْتُمْ إِنْ أَصْبَحَ مَاؤُكُمْ غَوْرًا
فَمَنْ يَأْتِيكُمْ بِمَاءٍ مَعِينٍ ٣٠

---

12. ಮಕ್ಕಾದಲ್ಲಿ ಪ್ರವಾದಿವರ್ಯರ(ಸ) ಸಂದೇಶ ಪ್ರಚಾರ ಆರಂಭವಾದಾಗ ಕುರೈಶ್‌ನ ವಿವಿಧ ಗೋತ್ರಗಳಿಗೆ ಸೇರಿದ ಜನರು ಇಸ್ಲಾಮ್ ಸ್ವೀಕರಿಸಲಾರಂಭಿಸಿದರು. ಆಗ ಪ್ರತಿಯೊಂದು ಮನೆಯಲ್ಲೂ ಪ್ರವಾದಿವರ್ಯರು(ಸ) ಮತ್ತವರ ಸಂಗಾತಿಗಳಿಗೆ ಶಾಪ ಹಾಕಲಾಗುತ್ತಿತ್ತು. ಅವರು ನಾಶವಾಗಿ ಹೋಗಲೆಂದು ಅವರ ವಿರುದ್ಧ ಮಾಟ-ಮಂತ್ರಗಳನ್ನು ಮಾಡಲಾಯಿತು. ಎಲ್ಲಿಯ ವರೆಗೆಂದರೆ ಅವರನ್ನು ಕೊಲೆ ಮಾಡುವ ಯೋಜನೆಗಳನ್ನೂ ಹೂಡಲಾಯಿತು. ಅದಕ್ಕಾಗಿ ಅವರೊಡನೆ -"ನಾವು ನಾಶವಾದರೂ ಅಥವಾ ಅಲ್ಲಾಹನ ಅನುಗ್ರಹದಿಂದ ಬದುಕುಳಿದರೂ ಅದರಿಂದ ನಿಮಗೇನು ಲಭಿಸುವುದು. ದೇವಯಾತನೆಯಿಂದ ನಿಮ್ಮನ್ನು ಯಾರು ರಕ್ಷಿಸುವರು ಎಂಬ ಕುರಿತು, "ನೀವು ಆಲೋಚಿಸಿ" ಎಂದು ಹೇಳಲು ಆದೇಶಿಸಲಾಗುತ್ತಿದೆ.





(ಅವತೀರ್ಣ - ಮಕ್ಕಾದಲ್ಲಿ)

ಪರಮ ದಯಾಮಯನೂ ಕರುಣಾನಿಧಿಯೂ ಆದ ಅಲ್ಲಾಹನ ನಾಮದಿಂದ

بِسْمِ اللّٰهِ الرَّحْمٰنِ الرَّحِيْمِ ○

1. ನೂನ್-ಲೇಖನಿಯ ಹಾಗೂ ಲೇಖಕರು ಬರೆಯುತ್ತಿರುವುದರಾಣೆ-[1]

نٓ وَالْقَلَمِ وَمَا يَسْطُرُوْنَ ①

2. ನಿಮ್ಮ ಪ್ರಭುವಿನ ಅನುಗ್ರಹದಿಂದ ನೀವು ಹುಚ್ಚರಲ್ಲ.[2]

مَآ اَنْتَ بِنِعْمَةِ رَبِّكَ بِمَجْنُوْنٍ ②

3. ಮತ್ತು ಖಂಡಿತವಾಗಿಯೂ ನಿಮಗಾಗಿ ಎಂದಿಗೂ ಮುಗಿದು ಹೋಗದಂತಹ ಸತ್ಫಲವಿದೆ.[3]

وَاِنَّ لَكَ لَاَجْرًا غَيْرَ مَمْنُوْنٍ ③

4. ಮತ್ತು ನಿಶ್ಚಯವಾಗಿಯೂ ನೀವು ಚಾರಿತ್ರ್ಯದ ಅತ್ಯುನ್ನತ ಮಟ್ಟದಲ್ಲಿದ್ದೀರಿ.[4]

وَاِنَّكَ لَعَلٰى خُلُقٍ عَظِيْمٍ ④

5. ಸದ್ಯದಲ್ಲೇ ನೀವೂ ನೋಡಿಕೊಳ್ಳುವಿರಿ ಮತ್ತು ಅವರೂ ಕಂಡುಕೊಳ್ಳುವರು-

فَسَتُبْصِرُ وَيُبْصِرُوْنَ ⑤

6. ನಿಮ್ಮ ಪೈಕಿ ಯಾರು ಮತಿಭ್ರಾಂತಿಗೊಳಗಾದವರೆಂಬುದನ್ನು.

بِاَيِّكُمُ الْمَفْتُوْنُ ⑥

1. ವ್ಯಾಖ್ಯಾನಕಾರರ ಇಮಾಮ್ ಎನಿಸಿಕೊಂಡಿರುವ ಮುಜಾಹಿದ್‌ರ ಪ್ರಕಾರ ಲೇಖನಿ ಎಂದರೆ ಈ ದಿಕ್ರ್- ಅರ್ಥಾತ್, ಕುರ್‌ಆನಿನನ್ನು ಬರೆಯಲಾಗುತ್ತಿರುವ ಲೇಖನಿಯಾಗಿದೆ. ಇದರಿಂದ ಬರೆಯಲಾಗುತ್ತಿದ್ದಂತಹ ಆ ವಿಷಯವೆಂದರೆ 'ಪವಿತ್ರ ಕುರ್‌ಆನ್' ಆಗಿದೆ ಎಂದು ಸ್ವಾಭಾವಿಕವಾಗಿಯೇ ಭಾವಿಸಬಹುದು.
2. ಇಲ್ಲಿ ಸಂಬೋಧನೆ ಪ್ರವಾದಿವರ್ಯರ(ಸ) ಕಡೆಗಿರುವಂತೆ ಮೇಲ್ನೋಟಕ್ಕೆ ಭಾಸವಾಗುತ್ತದೆ. ಆದರೆ ಮಕ್ಕಾದ ಸತ್ಯನಿಷೇಧಿಗಳು ಅವರನ್ನು ಹುಚ್ಚರೆಂದು ಪರಿಗಣಿಸುತ್ತಿದ್ದುದಕ್ಕೆ ಪ್ರತ್ಯುತ್ತರ ಕೊಡುವುದು ಇದರ ಮೂಲೋದ್ದೇಶವಾಗಿದೆ. ಅರ್ಥಾತ್, ಬರಹಗಾರರ ಮೂಲಕ ಬರೆಯಲ್ಪಡುತ್ತಿರುವ ಈ ಕುರ್‌ಆನ್ ಸ್ವತಃ ಅವರ ಆರೋಪದ ನಿರಾಕರಣೆಗೆ ಸಾಕು.
3. ದೇವನ ಸೃಷ್ಟಿಗಳ ಮಾರ್ಗದರ್ಶನಕ್ಕೆಂದು ಅವರು ಮಾಡುತ್ತಿರುವ ಪ್ರಯತ್ನಗಳ ಪ್ರತಿಯಾಗಿ ಅವರಿಗೆ ಅತ್ಯಂತ ವೇದನಾಯುಕ್ತವಾದ ಮಾತುಗಳನ್ನು ಕೇಳಬೇಕಾಗಿ ಬರುತ್ತಿದೆ. ಅದರ ಹೊರತಾಗಿಯೂ ಅವರು ತಮ್ಮ ಕರ್ತವ್ಯವನ್ನು ನಿರಂತರ ಪಾಲಿಸುತ್ತಿದ್ದಾರೆ. ಇದಕ್ಕೆ ಪ್ರತಿಯಾಗಿ ಅವರಿಗೆ ಅಗಣಿತ ಮತ್ತು ಅನಶ್ವರವಾದ ಪ್ರತಿಫಲಗಳಿವೆ.
4. ಅರ್ಥಾತ್- ಕುರ್‌ಆನ್ ಮಾತ್ರವಲ್ಲ ನಿಮ್ಮ ಉನ್ನತ ಚಾರಿತ್ರ್ಯವೂ ಸತ್ಯನಿಷೇಧಿಗಳು ನಿಮ್ಮ ಮೇಲೆ ಹೊರಿಸುತ್ತಿರುವ ಹುಚ್ಚಿನ ಆರೋಪ ಸುಳ್ಳು ಎಂಬುದಕ್ಕೆ ಅತ್ಯಂತ ಸ್ಪಷ್ಟವಾದ ಪುರಾವೆಯಾಗಿದೆ. ಏಕೆಂದರೆ ಉನ್ನತ ಚಾರಿತ್ರ್ಯ ಮತ್ತು ಬುದ್ಧಿಭ್ರಮಣೆ ಒಂದೇ ಕಡೆ ಸೇರಲು ಸಾಧ್ಯವಿಲ್ಲ.

7. ನಿಮ್ಮ ಪ್ರಭುವು ಅವನ ಮಾರ್ಗದಿಂದ ಭ್ರಷ್ಟರಾದವರು ಯಾರೆಂಬುದನ್ನೂ ಚೆನ್ನಾಗಿ ಅರಿತಿರುತ್ತಾನೆ ಮತ್ತು ಸನ್ಮಾರ್ಗದಲ್ಲಿ ರುವವನನ್ನೂ ಬಲ್ಲವನಾಗಿದ್ದಾನೆ.

إِنَّ رَبَّكَ هُوَ أَعْلَمُ بِمَنْ ضَلَّ عَنْ سَبِيلِهِ وَهُوَ أَعْلَمُ بِالْمُهْتَدِينَ ٧

8. ಆದುದರಿಂದ ನೀವು ಈ ಸುಳ್ಳಾಗಿಸುವವರ ಒತ್ತಡಕ್ಕೆ ಎಷ್ಟು ಮಾತ್ರಕ್ಕೂ ಮಣಿಯಬೇಡಿರಿ.

فَلَا تُطِعِ الْمُكَذِّبِينَ ٨

9. ನೀವು ಸ್ವಲ್ಪ ಮಣಿದರೆ ತಾವೂ ಮಣಿಯುವೆವೆಂದು ಇವರು ಇಚ್ಛಿಸುತ್ತಾರೆ.[5]

وَدُّوا لَوْ تُدْهِنُ فَيُدْهِنُونَ ٩

10. ಅತ್ಯಧಿಕ ಆಣೆ ಹಾಕುವ ನೀಚ ವ್ಯಕ್ತಿಗೆ ಎಷ್ಟು ಮಾತ್ರಕ್ಕೂ ಮಣಿಯಬೇಡಿರಿ-

وَلَا تُطِعْ كُلَّ حَلَّافٍ مَهِينٍ ١٠

11. (ಅವನು) ಮೂದಲಿಸುತ್ತಾನೆ, ಚಾಡಿ ಹೇಳುತ್ತಾ ತಿರುಗುತ್ತಾನೆ,

هَمَّازٍ مَشَّاءٍ بِنَمِيمٍ ١١

12. ಸತ್ಕಾರ್ಯಗಳನ್ನು ಮಾಡದಂತೆ ತಡೆಯುತ್ತಾನೆ, ಅಕ್ರಮ - ಅತಿರೇಕಗಳಲ್ಲಿ ಮಿತಿಮೀರುವವನಾಗಿದ್ದಾನೆ,

مَنَّاعٍ لِلْخَيْرِ مُعْتَدٍ أَثِيمٍ ١٢

13. ಮಹಾ ದುಷ್ಕರ್ಮಿಯಾಗಿದ್ದಾನೆ. ಪೀಡಕನಾಗಿದ್ದಾನೆ ಮತ್ತು ಇದೆಲ್ಲದರ ಜೊತೆಗೆ ಕುಲಗೆಟ್ಟವನೂ ಆಗಿದ್ದಾನೆ.-

عُتُلٍّ بَعْدَ ذَٰلِكَ زَنِيمٍ ١٣

14. ಅವನು ಬಹಳಷ್ಟು ಸಂಪತ್ತು ಮತ್ತು ಸಂತಾನವುಳ್ಳವನೆಂಬ ನೆಲೆಯಲ್ಲಿ ಹೀಗಾಗಿದ್ದಾನೆ.[6]

أَنْ كَانَ ذَا مَالٍ وَبَنِينَ ١٤

15. ಅವನಿಗೆ ನಮ್ಮ ಸೂಕ್ತಗಳನ್ನು ಓದಿ ಕೇಳಿಸಿದಾಗ, "ಇವೆಲ್ಲ ಗತಕಾಲದ ಕಟ್ಟುಕತೆಗಳು" ಎಂದು ಹೇಳುತ್ತಾನೆ.

إِذَا تُتْلَىٰ عَلَيْهِ آيَاتُنَا قَالَ أَسَاطِيرُ الْأَوَّلِينَ ١٥

16. ಶೀಘ್ರವೇ ನಾವು ಅವನ ಸೊಂಡಿಲಿನ ಮೇಲೆ ಬರೆ ಎಳೆಯಲಿದ್ದೇವೆ.[7]

سَنَسِمُهُ عَلَى الْخُرْطُومِ ١٦

5. ಅರ್ಥಾತ್- ನೀವು ಇಸ್ಲಾಮಿನ ಪ್ರಚಾರದಲ್ಲಿ ಸಡಿಲು ಬಿದ್ದರೆ ಅವರೂ ನಿಮ್ಮನ್ನು ವಿರೋಧಿಸುವುದರಲ್ಲಿ ಸ್ವಲ್ಪ ಮೃದು ಧೋರಣೆ ತಳೆಯಬಯಸುತ್ತಾರೆ ಅಥವಾ ಅವರ ಪಥಭ್ರಷ್ಟತೆಯ ಬಗ್ಗೆ ರಿಯಾಯಿತಿ ತೋರಿ ನಿಮ್ಮ ಧರ್ಮದಲ್ಲೇನಾದರೂ ತಿದ್ದುಪಡಿಯನ್ನು ಮಾಡಬಯಸಿದರೆ ಅವರು ನಿಮ್ಮ ಜತೆ ಸಂಧಾನ ಮಾಡಿಕೊಳ್ಳಬಯಸುತ್ತಾರೆ.

6. ಈ ವಾಕ್ಯವು ಮೇಲಿನ ವಾಕ್ಸರಣಿಗೆ ಸಂಬಂಧಿಸಿದ್ದಾಗಿರಬಹುದು ಅಥವಾ ಅನಂತರದ ವಾಕ್ಯಕ್ಕೆ ಸಂಬಂಧಿಸಿದ್ದಾಗಿರಲೂ ಬಹುದು. ಮೊದಲನೆಯದಕ್ಕೆ ಸಂಬಂಧಿಸಿದ್ದಾದರೆ ಇದರ ಅರ್ಥ- ಅವನ ಬಳಿ ಧಾರಾಳ ಸಂಪತ್ತು ಮತ್ತು ಸಂತಾನವಿರುವ ಕಾರಣಕ್ಕಾಗಿ ಅವನ ಒತ್ತಡಕ್ಕೆ ಮಣಿಯದಿರಿ ಎಂದಾಗುತ್ತದೆ. ಎರಡನೆಯದಕ್ಕೆ ಸಂಬಂಧಿಸಿದ್ದಾದರೆ ಇದರ ಅರ್ಥ- “ಧಾರಾಳ ಸಂಪತ್ತು ಮತ್ತು ಸಂತಾನವನ್ನು ಹೊಂದಿರುವುದರಿಂದಾಗಿ ಅವನು ದುರಹಂಕಾರಿಯಾಗಿ ಬಿಟ್ಟಿದ್ದಾನೆ. ನಮ್ಮ ಸೂಕ್ತಗಳನ್ನು ಅವನಿಗೆ ಓದಿ ಕೇಳಿಸಲಾದಾಗ ಇದು ಹಿಂದಿನ ಕಾಲದ ಕಟ್ಟು ಕಥೆಗಳಾಗಿವೆ ಎಂದು ಅವನು ಹೇಳುತ್ತಾನೆ” ಎಂದಾಗುತ್ತದೆ.

17. ನಾವು ಒಂದು ತೋಟದ ಮಾಲಕರನ್ನು ಪರೀಕ್ಷೆಗೆ ಗುರಿಪಡಿಸಿದ್ದಂತೆಯೇ ಇವರನ್ನು(ಮಕ್ಕಾ ವಾಸಿಗಳನ್ನು) ಪರೀಕ್ಷೆಗೊಳಪಡಿಸಿರುತ್ತೇವೆ. "ಖಂಡಿತವಾಗಿಯೂ ನಸುಕಿನಲ್ಲಿ ನಾವು ನಮ್ಮ ತೋಟದ ಫಲಗಳನ್ನು ಕೊಯ್ಯುವೆವು" ಎಂದು ಅವರು ಆಣೆ ಹಾಕುವಾಗ-

إِنَّا بَلَوْنَاهُمْ كَمَا بَلَوْنَا أَصْحَابَ الْجَنَّةِ ج إِذْ أَقْسَمُوا لَيَصْرِمُنَّهَا مُصْبِحِينَ ﴿١٧﴾

18. ಮತ್ತು ಅವರು ಯಾವುದೇ ವಿನಾಯಿತಿ ಮಾಡಿರಲಿಲ್ಲ.[8]

وَلَا يَسْتَثْنُونَ ﴿١٨﴾

19. ಇರುಳಲ್ಲಿ ಅವರು ನಿದ್ರಿಸುತ್ತಿದ್ದಾಗ ನಿಮ್ಮ ಪ್ರಭುವಿನ ಕಡೆಯಿಂದ ಆ ತೋಟಕ್ಕೆ ವಿಪತ್ತೊಂದು ಎರಗಿತು

فَطَافَ عَلَيْهَا طَائِفٌ مِّنْ رَّبِّكَ وَهُمْ نَائِمُونَ ﴿١٩﴾

20. ಮತ್ತು ಅದರ ಅವಸ್ಥೆಯು ಕೊಯ್ದು ಬೆಳೆಯಂತಾಗಿ ಬಿಟ್ಟಿತು-

فَأَصْبَحَتْ كَالصَّرِيمِ ﴿٢٠﴾

21. ಮುಂಜಾನೆ ಅವರು ಪರಸ್ಪರರನ್ನು ಕೂಗಿದರು-

فَتَنَادَوْا مُصْبِحِينَ ﴿٢١﴾

22. "ಫಲಗಳನ್ನು ಕೊಯ್ಯಬೇಕಿದ್ದರೆ ನಸುಕಿನಲ್ಲೇ ನಿಮ್ಮ ಹೊಲಗಳ ಕಡೆಗೆ ಹೊರಡಿರಿ" ಎಂದರು.

أَنِ اغْدُوا عَلَىٰ حَرْثِكُمْ إِنْ كُنْتُمْ صَارِمِينَ ﴿٢٢﴾

23. ಹೀಗೆ ಅವರು ಹೊರಟರು ಮತ್ತು ಅವರು ಪರಸ್ಪರರೊಡನೆ ಪಿಸು ಗುಟ್ಟುತ್ತಲಿದ್ದರು-

فَانْطَلَقُوا وَهُمْ يَتَخَافَتُونَ ﴿٢٣﴾

24. ಇಂದು ಬಡವನಾರೂ ನಿಮ್ಮ ತೋಟದೊಳಗೆ ಬಾರದಂತೆ ನೋಡಿಕೊಳ್ಳಬೇಕೆಂದು.

أَنْ لَّا يَدْخُلَنَّهَا الْيَوْمَ عَلَيْكُمْ مِّسْكِينٌ ﴿٢٤﴾

25. ಏನೂ ಕೊಡಬಾರದೆಂದು ನಿರ್ಧರಿಸಿಕೊಂಡು, (ಫಲ ಕೊಯ್ಯಲು) ತಾವು ಶಕ್ತರೆಂಬಂತೆ ನಸುಕಿನಲ್ಲೇ ಲಗುಬಗೆಯಿಂದ ಅಲ್ಲಿಗೆ ಹೋದರು.

وَّغَدَوْا عَلَىٰ حَرْدٍ قَادِرِينَ ﴿٢٥﴾

26. ಆದರೆ ತೋಟವನ್ನು ಕಂಡಾಗ ಹೇಳ ತೊಡಗಿದರು, "ನಾವು ದಾರಿ ತಪ್ಪಿದ್ದೇವೆ-

فَلَمَّا رَأَوْهَا قَالُوا إِنَّا لَضَالُّونَ ﴿٢٦﴾

7. ಅವನು ತನ್ನನ್ನು ದೊಡ್ಡ ಮೂಗಿನವನೆಂದು ಭಾವಿಸಿಕೊಳ್ಳುತ್ತಿದ್ದನು. ಆದ್ದರಿಂದ ಅವನ ಮೂಗನ್ನು ಸೊಂಡಿಲು ಎನ್ನಲಾಗಿದೆ. ಸೊಂಡಿಲಿಗೆ ಬರೆ ಎಳೆಯುವುದೆಂದರೆ ನಿಂದ್ಯತೆಗೀಡು ಮಾಡುವುದಾಗಿದೆ. ಅರ್ಥಾತ್, ನಾವು ಅವನನ್ನು ಇಹ-ಪರಗಳಲ್ಲಿ ಯಾವ ರೀತಿ ನಿಂದ್ಯನನ್ನಾಗಿ ಮಾಡುತ್ತೇವೆಂದರೆ ಅನಂತ ಕಾಲದ ವರೆಗೂ ಈ ನಿಂದ್ಯತೆ ಅವನ ಬೆಂಬಿಡಲಾರದು.

8. ಅರ್ಥಾತ್- ಅವರಿಗೆ ತಮ್ಮ ಸಾಮರ್ಥ್ಯ ಮತ್ತು ಅಧಿಕಾರಗಳ ಬಗ್ಗೆ ಎಷ್ಟು ವಿಶ್ವಾಸವಿತ್ತೆಂದರೆ, "ನಾವು ನಾಳೆ ತೋಟದ ಫಲವನ್ನು ಕೊಯ್ದೇ ತೀರುವೆವು" ಎಂದು ಆಣೆ ಹಾಕಿ ನಿಸ್ಸಂಕೋಚವಾಗಿ ಹೇಳಿಬಿಟ್ಟರು. ಅಲ್ಲಾನಿಚ್ಛಿಸಿದರೆ ನಾವು ಈ ಕೆಲಸವನ್ನು ಮಾಡುವೆವು ಎಂದು ಹೇಳುವಂತಹ ಔಚಿತ್ಯವೇ ಅವರಿಗೆ ತಲೆದೋರಲಿಲ್ಲ.

27. ಅಲ್ಲ, ನಿಜವಾಗಿ ನಾವು ವಂಚಿತರಾಗಿ ಬಿಟ್ಟಿದ್ದೇವೆ."

بَلْ نَحْنُ مَحْرُوْمُوْنَ ﴿٢٧﴾

28. ಅವರ ಪೈಕಿ ಉತ್ತಮನಾಗಿದ್ದವನು, "ನೀವು ಅಲ್ಲಾಹನನ್ನು ಸ್ತುತಿಸುವುದಿಲ್ಲವೇಕೆ ಎಂದು ನಾನು ನಿಮ್ಮೊಡನೆ ಹೇಳಿರಲಿಲ್ಲವೇ?" ಎಂದನು.[9]

قَالَ اَوْسَطُهُمْ اَلَمْ اَقُلْ لَّكُمْ
لَوْلَا تُسَبِّحُوْنَ ﴿٢٨﴾

29. ಆಗ ಅವರು, "ನಮ್ಮ ಪ್ರಭು ಪರಮ ಪಾವನನು, ನಿಜಕ್ಕೂ ನಾವು ಅಕ್ರಮಿಗಳಾಗಿದ್ದೆವು" ಎಂದರು.

قَالُوْا سُبْحٰنَ رَبِّنَآ اِنَّا كُنَّا ظٰلِمِيْنَ ﴿٢٩﴾

30. ತರುವಾಯ ಅವರಲ್ಲಿ ಪ್ರತಿಯೊಬ್ಬನೂ ಇನ್ನೊಬ್ಬನನ್ನು ತೆಗಳತೊಡಗಿದನು.

فَاَقْبَلَ بَعْضُهُمْ عَلٰى بَعْضٍ يَّتَلَاوَمُوْنَ ﴿٣٠﴾

31. ಕೊನೆಗೆ ಅವರು, "ಅಯ್ಯೋ ನಮ್ಮ ಪಾಡು! ನಿಜಕ್ಕೂ ನಾವು ವಿದ್ರೋಹಿಗಳಾಗಿ ಬಿಟ್ಟಿದ್ದೆವು.

قَالُوْا يٰوَيْلَنَآ اِنَّا كُنَّا طٰغِيْنَ ﴿٣١﴾

32. ನಮ್ಮ ಪ್ರಭು ಇದಕ್ಕೆ ಬದಲಾಗಿ ಇದಕ್ಕಿಂತಲೂ ಉತ್ತಮ ತೋಟ ದಯಪಾಲಿಸಲೂ ಬಹುದು. ನಾವು ನಮ್ಮ ಪ್ರಭುವಿನ ಕಡೆಗೆ ಮರಳುತ್ತೇವೆ" ಎಂದರು.

عَسٰى رَبُّنَآ اَنْ يُّبْدِلَنَا خَيْرًا مِّنْهَآ
اِنَّآ اِلٰى رَبِّنَا رٰغِبُوْنَ ﴿٣٢﴾

33. ಯಾತನೆಯು ಹೀಗಿರುತ್ತದೆ ಮತ್ತು ಪರಲೋಕದ ಯಾತನೆಯಂತು ಇದಕ್ಕಿಂತಲೂ ದೊಡ್ಡದಾಗಿದೆ. ಇದನ್ನು ಇವರು ತಿಳಿದಿರುತ್ತಿದ್ದರೆ!

كَذٰلِكَ الْعَذَابُ ۭ وَلَعَذَابُ الْاٰخِرَةِ
اَكْبَرُ ۘ لَوْ كَانُوْا يَعْلَمُوْنَ ﴿٣٣﴾

34. ಖಂಡಿತವಾಗಿಯೂ[10] ದೇವಭಯವುಳ್ಳವರಿಗಾಗಿ ಅವರ ಪ್ರಭುವಿನ ಬಳಿ ಅನುಗ್ರಹಗಳು ತುಂಬಿರುವ ಸ್ವರ್ಗೋದ್ಯಾನಗಳಿವೆ.

اِنَّ لِلْمُتَّقِيْنَ عِنْدَ رَبِّهِمْ جَنّٰتِ
النَّعِيْمِ ﴿٣٤﴾

35. ನಾವು ಆಜ್ಞಾಪಾಲಕರ ಸ್ಥಿತಿಯನ್ನು ಅಪರಾಧಿಗಳಂತೆ ಮಾಡಿ ಬಿಡಬೇಕೇ?

اَفَنَجْعَلُ الْمُسْلِمِيْنَ كَالْمُجْرِمِيْنَ ﴿٣٥﴾

36. ನಿಮಗೇನಾಗಿದೆ? ನೀವು ಅದೆಂತಹ ತೀರ್ಮಾನ ಮಾಡುತ್ತಿರುವಿರಿ?

مَا لَكُمْ ۣ كَيْفَ تَحْكُمُوْنَ ﴿٣٦﴾

37-38. ನೀವು ಏನನ್ನು ಮೆಚ್ಚುತ್ತೀರೋ ಅದುವೇ ನಿಮಗಲ್ಲಿ

اَمْ لَكُمْ كِتٰبٌ فِيْهِ تَدْرُسُوْنَ ﴿٣٧﴾

9. ಅರ್ಥಾತ್- ಅಲ್ಲಾಹನನ್ನೇಕೆ ಸ್ಮರಿಸುವುದಿಲ್ಲ. ಪರಮ ಪಾವನನಾದ ಪರಿಪಾಲಕ ಮೇಲಿದ್ದಾನೆಂಬುದನ್ನು ನೀವು ಮರೆತು ಬಿಟ್ಟಿರಾ?

10. ಮಕ್ಕಾದ ದೊಡ್ಡ ದೊಡ್ಡ ಸರದಾರರು ಮುಸ್ಲಿಮರನ್ನುದ್ದೇಶಿಸಿ ಹೀಗೆನ್ನುತ್ತಿದ್ದರು, "ನಮಗೆ ಈ ಲೋಕದಲ್ಲಿ ದೊರೆಯುತ್ತಿರುವ ಅನುಗ್ರಹಗಳು ನಾವು ದೇವನ ಪ್ರೀತಿಗೆ ಪಾತ್ರರಾಗಿರುವುದನ್ನು ಸೂಚಿಸುತ್ತದೆ. ನೀವು ಯಾವ ದುಸ್ಥಿತಿಯಲ್ಲಿ ಸಿಲುಕಿಕೊಂಡಿದ್ದೀರೋ ಅದು ದೇವನು ನಿಮ್ಮ ಬಗ್ಗೆ ಕ್ರೋಧಕ್ಕೊಳಗಾಗಿದ್ದಾನೆಂಬುದನ್ನು ಸೂಚಿಸುತ್ತದೆ. ಆದ್ದರಿಂದ ಒಂದು ವೇಳೆ ನೀವು ಹೇಳುವಂತೆ ಪುನರುತ್ಥಾನ ದಿನ ಬಂದರೂ ಅಲ್ಲಿಯೂ ನಾವೇ ಸವಿಯುಣ್ಣುತ್ತಿರುವೆವು ಮತ್ತು ಯಾತನೆಯು ನಮ್ಮ ಮೇಲಲ್ಲ ಬದಲಾಗಿ ನಿಮ್ಮ ಮೇಲಿರುವುದು." ಪ್ರಸ್ತುತ ಮಾತಿಗೆ ಈ ಸೂಕ್ತದಲ್ಲಿ ಉತ್ತರ ಕೊಡಲಾಗಿದೆ.

ಖಂಡಿತ ಸಿಗುವುದೆಂದು ನೀವು ಓದುವಂತಹ ಗ್ರಂಥವೇನಾದರೂ[11] ನಿಮ್ಮ ಬಳಿಯಿದೆಯೇ?

إِنَّ لَكُمْ فِيهِ لَمَا تَخَيَّرُونَ ٣٨

39. ಅಥವಾ ನೀವೇನು ಅಪ್ಪಣೆ ಮಾಡುವಿರೋ ಅದುವೇ ನಿಮಗೆ ಸಿಗುವುದೆಂದು ಪುನರುತ್ಥಾನದವರೆಗಾಗಿ ನಿಮ್ಮೊಂದಿಗೆ ಮಾಡಿ ಕೊಂಡ ಯಾವುದಾದರೂ ಒಪ್ಪಂದದ ಬಾಧ್ಯತೆ ನಮ್ಮ ಮೇಲಿ ದೆಯೇ?

أَمْ لَكُمْ أَيْمَانٌ عَلَيْنَا بَالِغَةٌ إِلَىٰ يَوْمِ الْقِيَامَةِ ۙ إِنَّ لَكُمْ لَمَا تَحْكُمُونَ ٣٩

40. ನಿಮ್ಮ ಪೈಕಿ ಇದಕ್ಕೆ ಜಾಮೀನುದಾರನು ಯಾರು ಎಂದು ಇವರೊಡನೆ ಕೇಳಿರಿ.

سَلْهُمْ أَيُّهُم بِذَٰلِكَ زَعِيمٌ ٤٠

41. ಅಥವಾ (ಇದರ ಹೊಣೆ ಹೊತ್ತಿರುವ) ಇವರೇ ನೇಮಿಸಿಕೊಂಡ ದೇವಸಹಭಾಗಿಗಳು ಯಾರಾದರೂ ಇದ್ದಾರೆಯೇ? ಇವರು ಸತ್ಯವಂತರಾಗಿದ್ದರೆ ತಮ್ಮ ಸಹಭಾಗಿಗಳನ್ನು ತರಲಿ.

أَمْ لَهُمْ شُرَكَاءُ فَلْيَأْتُوا بِشُرَكَائِهِمْ إِن كَانُوا صَادِقِينَ ٤١

42. ಅತ್ಯಂತ ಕಠಿಣ ಪರಿಸ್ಥಿತಿ ಎದುರಾಗುವ ದಿನ ಜನರನ್ನು ಸಾಷ್ಟಾಂಗವೆರಗಲಿಕ್ಕಾಗಿ ಕರೆಯುವಾಗ ಇವರಿಗೆ ಸಾಷ್ಟಾಂಗವೆರಗಲು ಸಾಧ್ಯವಾಗದು.

يَوْمَ يُكْشَفُ عَن سَاقٍ وَيُدْعَوْنَ إِلَى السُّجُودِ فَلَا يَسْتَطِيعُونَ ٤٢

43. ಇವರ ದೃಷ್ಟಿಗಳು ತಗ್ಗಿರುವುವು. ಅಪಮಾನವು ಇವರನ್ನು ಆವರಿಸಿಕೊಂಡಿರುವುದು. ಇವರು ಕ್ಷೇಮವಾಗಿದ್ದಾಗ ಇವರನ್ನು ಸಾಷ್ಟಾಂಗವೆರಗಲಿಕ್ಕಾಗಿ ಕರೆಯಲಾಗುತ್ತಿತ್ತು. (ಆಗ ಇವರು ನಿರಾಕರಿಸುತ್ತಿದ್ದರು)

خَاشِعَةً أَبْصَارُهُمْ تَرْهَقُهُمْ ذِلَّةٌ ۖ وَقَدْ كَانُوا يُدْعَوْنَ إِلَى السُّجُودِ وَهُمْ سَالِمُونَ ٤٣

44. ಆದುದರಿಂದ ಸಂದೇಶವಾಹಕರೇ, ಈ ವಚನವನ್ನು ತಿರಸ್ಕರಿಸು ವವರ ವಿಷಯವನ್ನು ನೀವು ನನಗೆ ಬಿಡಿರಿ. ನಾವು ಇವರಿಗೆ ಅರಿವೇ ಆಗದ ರೀತಿಯಲ್ಲಿ ಕ್ರಮೇಣ ಇವರನ್ನು ವಿನಾಶದ ಕಡೆಗೆ ಒಯ್ಯುವೆವು.

فَذَرْنِي وَمَن يُكَذِّبُ بِهَٰذَا الْحَدِيثِ ۖ سَنَسْتَدْرِجُهُم مِّنْ حَيْثُ لَا يَعْلَمُونَ ٤٤

45. ನಾನು ಇವರನ್ನು ಸಡಿಲು ಬಿಡುತ್ತಿದ್ದೇನೆ, ನನ್ನ ತಂತ್ರವು ಪ್ರಚಂಡವಾಗಿದೆ.

وَأُمْلِي لَهُمْ ۚ إِنَّ كَيْدِي مَتِينٌ ٤٥

46. ಇವರು ತೀವ್ರ ಭಾರದಡಿಯಲ್ಲಿ ನರಳುವಂತಾಗಲು, ನೀವು ಇವರಿಂದ ಏನಾದರೂ ಸಂಭಾವನೆ ಕೇಳುತ್ತಿರುವಿರಾ?

أَمْ تَسْأَلُهُمْ أَجْرًا فَهُم مِّن مَّغْرَمٍ مُّثْقَلُونَ ٤٦

11. ಅರ್ಥಾತ್- ಅಲ್ಲಾಹನು ಕಳುಹಿಸಿರುವ ಗ್ರಂಥ.

47. ಇವರು ಬರೆದಿಡುತ್ತಿರುವಂತಹ ಪರೋಕ್ಷಜ್ಞಾನವೇನಾದರೂ ಇವರ ಬಳಿ ಇದೆಯೇ?

أَمْ عِندَهُمُ الْغَيْبُ فَهُمْ يَكْتُبُونَ ﴿٤٧﴾

48. ಸರಿ, ನೀವು ನಿಮ್ಮ ಪ್ರಭುವಿನ ತೀರ್ಪು ಪ್ರಕಟವಾಗುವ ವರೆಗೆ ತಾಳ್ಮೆ ವಹಿಸಿರಿ ಮತ್ತು ಮತ್ಸ್ಯದವರಂತೆ (ಹ. ಯೂನುಸ್) ಆಗಬೇಡಿರಿ.[12] ಅವರು ಕೂಗಿ ಪ್ರಾರ್ಥಿಸಿದಾಗ, ಅವರು ಬಹಳ ದುಃಖಪೀಡಿತರಾಗಿದ್ದರು.

فَاصْبِرْ لِحُكْمِ رَبِّكَ وَلَا تَكُن كَصَاحِبِ الْحُوتِ إِذْ نَادَىٰ وَهُوَ مَكْظُومٌ ﴿٤٨﴾

49. ಅವರ ಪ್ರಭುವಿನ ಕೃಪೆಯು ಅವರಿಗೆ ಸಿಗದೆ ಇರುತ್ತಿದ್ದರೆ, ಅವರು ಅಪಮಾನಿತರಾಗಿ ಬಟ್ಟಬಯಲಿನಲ್ಲಿ ಎಸೆಯಲ್ಪಡುತ್ತಿದ್ದರು.

لَّوْلَا أَن تَدَارَكَهُ نِعْمَةٌ مِّن رَّبِّهِ لَنُبِذَ بِالْعَرَاءِ وَهُوَ مَذْمُومٌ ﴿٤٩﴾

50. ಕೊನೆಗೆ ಅವರ ಪ್ರಭು ಅವರನ್ನು ಆರಿಸಿಕೊಂಡನು ಮತ್ತು ಅವರನ್ನು ಸಜ್ಜನ ದಾಸರ ಪಾಲಿಗೆ ಸೇರಿಸಿಕೊಂಡನು.

فَاجْتَبَاهُ رَبُّهُ فَجَعَلَهُ مِنَ الصَّالِحِينَ ﴿٥٠﴾

51. ಈ ಸತ್ಯನಿಷೇಧಿಗಳು, ಉಪದೇಶವನ್ನು (ಕುರ್‌ಆನನ್ನು) ಕೇಳಿದಾಗ ನಿಮ್ಮನ್ನು ಕಿತ್ತು ಹಾಕುವರೋ ಎಂಬಂತೆ ನಿಮ್ಮನ್ನು ದುರುಗುಟ್ಟುತ್ತಾರೆ ಮತ್ತು ಇವನು ಖಂಡಿತ ಹುಚ್ಚನೆಂದು ಹೇಳುತ್ತಾರೆ.

وَإِن يَكَادُ الَّذِينَ كَفَرُوا لَيُزْلِقُونَكَ بِأَبْصَارِهِمْ لَمَّا سَمِعُوا الذِّكْرَ وَيَقُولُونَ إِنَّهُ لَمَجْنُونٌ ﴿٥١﴾

52. ವಾಸ್ತವದಲ್ಲಿ ಇದು ಸಕಲ ವಿಶ್ವದವರಿಗೆ ಒಂದು ಉಪದೇಶವಾಗಿದೆ.

وَمَا هُوَ إِلَّا ذِكْرٌ لِّلْعَالَمِينَ ﴿٥٢﴾

---

12. ಅರ್ಥಾತ್- ಯೂನುಸ್‌ರಂತೆ(ಅ) ತಾಳ್ಮೆಗೇಡಿತನದಿಂದ ವರ್ತಿಸದಿರಿ. ಅವರನ್ನು ಅವರ ಅಸಹನೆಯಿಂದಾಗಿಯೇ ಮೀನಿನ ಹೊಟ್ಟೆಗೆ ತಲಪಿಸಲಾಗಿತ್ತು.